<u>ಅಸಲು ದಾವಾಃ-**29/15**</u> ಡಿ.ಡಬ್ಲ್ಯೂ:- **1**

ದಿನಾಂಕಃ **03.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ:- ಪ್ರತಿವಾದಿಗಳ ಪರ ವಕೀಲರಿಂದ:-</u>

ನಾನು ಈ ದಾವೆಯಲ್ಲಿ ಪ್ರತಿವಾದಿ ಪರ ಜಿ ಪಿ ಎ ದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

ಜಿ. ಪಿ. ಎ ಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-**1** ಎಂದು ಗುರುತಿಸಲಾಯಿತು.

ಸರ್ವೆ ನಂ. 192 ರ 9 ಪುಟಗಳುಳ್ಳ ಗಣಕೀಕೃತ ಆರ್ ಟಿ ಸಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-**2** ಎಂದು ಗುರುತಿಸಲಾಯಿತು.

ಸರ್ವೆ ನಂ. 145/2, 132/1, 90 ರ ಆಸ್ತಿಯ ಆರ್ ಟಸಿ ಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಡಿ-**3** ರಿಂದ **5** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

**1** ನೇ ಪ್ರತಿವಾದಿ ನನ್ನ ತಾಯಿ. ದಾವಾ ಆಸ್ತಿಗಳು ಕುರುವ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತದೆ. ದಾವಾ ಆಸ್ತಿಗಳು ಮೂಲತಃ ಮೃತ ಚನ್ನವೀರಪ್ಪಗೌಡರವರಿಗೆ ಸೇರಿದ್ದು. ದಾವಾ ಆಸ್ತಿಗಳು ಚನ್ನವೀರಪ್ಪಗೌಡರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತದೆ. **1** ನೇ ಪ್ರತಿವಾದಿಗೆ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ಹೇಳುವಷ್ಟು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ಸಿಗಳಲ್ಲಿ **1** ನೇ ಪ್ರತಿವಾದಿಗೆ **1/7** ಭಾಗಂಶದ ಹಕ್ಕು ಇರುತ್ತದೆ. ವಾದಿಯು ಸಹ ದಾವಾ ಆಸ್ತಿಗಳಲ್ಲಿ **1/7** ಭಾಗಂಶದ ಹಕ್ಕು ಹಿತಾಸಕ್ತಿ ಇದೆ ಎಂದರೆ ಸರಿ .

<u>ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ವಕೀಲರಿಂದಃ</u>

ಚನ್ನವೀರಪ್ಪಗೌಡ ನನ್ನ ತಾಯಿಯ ತಂದೆ, ನನಗೆ ಅಜ್ಜರಾಗಬೇಕು. ನನ್ನ ಚನ್ನವೀರಪ್ಪಗೌಡರವರಿಗೆ **3** ಜನ ಹೆಂಡತಿಯರು ಅಂದರೆ ಹಾಲಮ್ಮ ,ಹಿರಿಯಮ್ಮ ಮತ್ತು ಬಸಮ್ಮ. **1** ನೇ ಪ್ರತಿವಾದಿ ಹಾಲಮ್ಮ ಮಗಳು ಎಂದರೆ ಸರಿ. ಹಿರಿಯಮ್ಮ **2**

ನೇ ಪ್ರತಿವಾದಿಯ ತಾಯಿ. ವಾದಿ, ಪ್ರತಿವಾದ **4** ರಿಂದ **6, 3** ನೆ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಸಾಕ್ಷಿಗೆ **1** ನೇ ಪ್ರತಿವಾದಿ ಆರೋಗ್ಯವಾಗಿ ಇದ್ದಾರ ಎಂದರೆ ಸಾಕ್ಷಿಯು ಕಿವಿ ಕೇಳುವುದಿಲ್ಲ ಮತ್ತು ಸರಿಯಾಗಿ ಓಡಾಡಲು ಬರುವುದಿಲ್ಲ ಎಂದು ನುಡಿಯತ್ತಾರೆ. **1** ನೇ ಪ್ರತಿವಾದಿ ಆರೋಗ್ಯವಾಗಿದ್ದರೂ ಸಹ ಆರೋಗ್ಯವಾಗಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ-1 ಮುಕ್ತಾರನಾಮೆಗೆ ನಾನು ಮತ್ತು ನನ್ನ ತಾಯಿ ಕೊಟ್ಟಿರುತ್ತೇನೆ. ನಿಡಿ-1 ದಾಖಲೆಯನ್ನು ನ್ಯಾಯಾಲಯದಲ್ಲಿ ಆವರಣದಲ್ಲಿ ಮಾಡಿಸಿರುತ್ತೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿಗೆ 1/7 ಭಾಗಂಶ ಕೇಳುವ ಹಕ್ಕು ಇಲ್ಲ, ಕೇವಲ 1/3 ಭಾಗಂಶವನ್ನು ಕೇಳುವ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿ , 1 ನೇ ಪ್ರತಿವಾದಿ , 3 ರಿಂದ 6 ನೇ ಪ್ರತಿವಾದಿಗಳು ಶಾಮೀಲಾಗಿ 2 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನಮಗೆ 1/3 ಭಾಗಂಶದ ಹಕ್ಕು ಇದ್ದರೂ ಸಹ 1/7 ಭಾಗಂಶದ ಹಕ್ಕು ಇದೇ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಒಂದು ವೇಳೆ 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ನಾನು 1 ನೇ ಪ್ರತಿವಾದಿಯಿಂದ ಮುಕ್ತಾರನಾಮೆಯನು ಪಡೆದುಕೊಂಡು ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ನಾನು ಮತ್ತು ನನ್ನ ಅಕ್ಕ ಹಾಲಮ್ಮರವರು ವಾದಿ ಮತ್ತು ಪ್ರತಿವಾದಿಗಳ ವಿರುದ್ಧ ಭಾಗಂಶ ಕೋರಿ ಅಸಲು ದಾವಾ ಸಂ. 105/25 ರ ದಾವೆಯನ್ನು ಸಲ್ಲಿಸಿದೇವೆ ಎಂದರೆ ಸರಿ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಇದೇ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.